**Akashvani : Bangalore**
**National Bulletin In Kannada**
**11.08.2024 / 9.05 am**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**11.08.2024 / 9.05 am**

**<><*<><>*><>**

ಮುಖ್ಯಾಂಶಗಳು

**<><*<><>*><>**

೧. ನವದೆಹಲಿಯಲ್ಲಿಂದು ೧೦೯ಕ್ಕೂ ಹೆಚ್ಚು ಕೃಷಿ ಸಂಬಂಧಿತ ತಳಿ ಬಿಡುಗಡೆ ಮಾಡಲಿರುವ ಪ್ರಧಾನಿ ನರೇಂದ್ರ ಮೋದಿ

೨. ವಕ್ಫ್ ಮಸೂದೆ- ೨೦೨೪; ಚಳಿಗಾಲದ ಅಧಿವೇಶನದ ಮೊದಲ ವಾರದ ಕೊನೆಯ ದಿನದೊಳಗೆ ಲೋಕಸಭೆಗೆ ವರದಿ ಸಲ್ಲಿಕೆ -ಕೇಂದ್ರ ಸಚಿವ ಕಿರಣ್ ರಿಜಿಜು

೩. ಭಾರತೀಯ ಕುಸ್ತಿಪಟು ವಿನೇಶ್ ಫೋಗಟ್ ಅನರ್ಹತೆ, ತೀರ್ಪು ಕಾಯ್ದಿರಿಸಿದ ಸಿಎಎಸ್

೪. ಪ್ಯಾರಿಸ್ ಒಲಿಂಪಿಕ್ಸ್ ೨೦೨೪ ಕ್ಕೆ ಇಂದು ವಿದ್ಯುಕ್ತ ತೆರೆ

**<><*<><>*><>**

ಪ್ರಧಾನಿ ನರೇಂದ್ರ ಮೋದಿ ಅವರು, ನವದೆಹಲಿಯಲ್ಲಿಂದು ೧೦೯ಕ್ಕೂ ಹೆಚ್ಚು ಇಳುವರಿ ನೀಡುವ ಹವಾಮಾನ ನಿರೋಧಕ ಮತ್ತು ಜೈವಿಕ ಬಲವರ್ಧಿತ ಕೃಷಿ ಸಂಬಂಧಿತ ತಳಿಗಳನ್ನು ಬಿಡುಗಡೆ ಮಾಡಲಿದ್ದಾರೆ. ಈ ಸಂದರ್ಭದಲ್ಲಿ ಪ್ರಧಾನಿಯವರು, ರೈತರು ಮತ್ತು ವಿಜ್ಞಾನಿಗಳೊಂದಿಗೆ ಸಂವಾದ ನಡೆಸಲಿದ್ದಾರೆ. ೩೪ ಕೃಷಿ ಬೆಳೆಗಳು, ೨೭ ತೋಟಗಾರಿಕಾ ಬೆಳೆಗಳನ್ನು ಒಳಗೊಂಡಿರುವ ೬೧ ಬೆಳೆಗಳನ್ನು ಬಿಡುಗಡೆ ಮಾಡಲಿದ್ದು, ಇದರಲ್ಲಿ ೧೦೯ ಪ್ರಬೇಧಗಳು ಸೇರಿವೆ ಎಂದು ಪ್ರಧಾನಮಂತ್ರಿ ಕಾರ್ಯಾಲಯ ಹೇಳಿಕೆಯಲ್ಲಿ ತಿಳಿಸಿದೆ. ಕೃಷಿ ಬೆಳೆಗಳಲ್ಲಿ ರಾಗಿ, ಮೇವು, ಎಣ್ಣೆ-ಕಾಳುಗಳು, ದ್ವಿದಳ ಧಾನ್ಯಗಳು, ಕಬ್ಬು, ಹತ್ತಿ, ನಾರು ಮತ್ತು ಇತರೆ ಧಾನ್ಯಗಳ ಬೀಜಗಳನ್ನು ಬಿಡುಗಡೆ ಮಾಡಲಿದ್ದಾರೆ. ತೋಟಗಾರಿಕೆ ಬೆಳೆಗಳಲ್ಲಿ ವಿವಿಧ ರೀತಿಯ ಹಣ್ಣುಗಳು, ತರಕಾರಿಗಳು, ಗೆಡ್ಡೆಗಳು, ಮಸಾಲೆಗಳು ಮತ್ತು ಔಷಧೀಯ ಸಸ್ಯಗಳು ಒಳಗೊಂಡಿವೆ.

**<><*<><>*><>**

ವಕ್ಫ್ ಮಸೂದೆ, ೨೦೨೪ ಅನ್ನು ಪರಿಶೀಲಿಸಲು ರಚಿಸಲಾದ ಜಂಟಿ ಸಂಸದೀಯ ಸಮಿತಿ- ಜೆಪಿಸಿ ಯು ಚಳಿಗಾಲದ ಅಧಿವೇಶನದ ಮೊದಲ ವಾರದ ಕೊನೆಯ ದಿನದೊಳಗೆ ತನ್ನ ವರದಿಯನ್ನು ಲೋಕಸಭೆಗೆ ಸಲ್ಲಿಸಲಿದೆ ಎಂದು ಕೇಂದ್ರ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಹೇಳಿದ್ದಾರೆ. ಸಂಸತ್ತಿನ ಸಾಮಾಜಿಕ ಮಾಧ್ಯಮದ ಸಂವಾದದ ಸಂದರ್ಭದಲ್ಲಿ, ರಿಜಿಜು ಅವರು ಈ ವಿಷಯದ ಬಗ್ಗೆ ವಿಚಾರಣೆಯ ದಿನಾಂಕವನ್ನು ಜೆಪಿಸಿ ಪ್ರಕಟಿಸುತ್ತದೆ ಎಂದು ತಿಳಿಸಿದ್ದಾರೆ.

<><*<><>*><>

ಉತ್ತರ ಪ್ರದೇಶ ಬಿಜೆಪಿ ಘಟಕವು, 'ಹರ್ ಘರ್ ತಿರಂಗಾ' ಅಭಿಯಾನದ ಭಾಗವಾಗಿ ಇಂದಿನಿಂದ ರಾಜ್ಯದ ಎಲ್ಲಾ ೪೦೩ ವಿಧಾನಸಭಾ ಕ್ಷೇತ್ರಗಳಲ್ಲಿ ತ್ರಿವರ್ಣ ಧ್ವಜದ ಮೆರವಣಿಗೆಯನ್ನು ಆಯೋಜಿಸಲಿದೆ. ಮಂಗಳವಾರದಂದು ಮುಕ್ತಾಯಗೊಳ್ಳಲಿರುವ ಮೆರವಣಿಗೆಯು ರಾಜ್ಯಾದ್ಯಂತ ಸಂಚರಿಸಿ ದೇಶಪ್ರೇಮದ ಸಂದೇಶವನ್ನು ಸಾರಲಿದೆ. ಮೆರವಣಿಗೆಯಲ್ಲಿ ರಾಜ್ಯ ಬಿಜೆಪಿ ಅಧ್ಯಕ್ಷ ಭೂಪೇಂದ್ರ ಸಿಂಗ್ ಚೌಧರಿ, ರಾಜ್ಯ ಪ್ರಧಾನ ಕಾರ್ಯದರ್ಶಿ ಧರಂಪಾಲ್ ಸಿಂಗ್, ರಾಜ್ಯದ ಸಚಿವರು, ಸಂಸದರು, ಶಾಸಕರು, ಪಕ್ಷದ ಪದಾಧಿಕಾರಿಗಳು, ಸ್ಥಳೀಯ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ.

<><*<><>*><>

ನೇಪಾಳ ವಿದೇಶಾಂಗ ಕಾರ್ಯದರ್ಶಿ ಸೇವಾ ಲಮ್ಸಾಲ್ ಆಹ್ವಾನದ ಮೇರೆಗೆ ಭಾರತದ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಇಂದಿನಿಂದ ನೇಪಾಳಕ್ಕೆ ಎರಡು ದಿನಗಳ ಅಧಿಕೃತ ಭೇಟಿ ನೀಡಲಿದ್ದಾರೆ. ವಿದೇಶಾಂಗ ಕಾರ್ಯದರ್ಶಿಗಳ ಈ ಭೇಟಿಯು ಭಾರತ-ನೇಪಾಳ ದ್ವಿಪಕ್ಷೀಯ ಬಾಂಧವ್ಯವನ್ನು ಮತ್ತಷ್ಟು ಬಲಪಡಿ ಹೆಚ್ಚಿಸಲು ಸಹಕಾರಿಯಾಗಲಿದೆ. ನೇಪಾಳದಲ್ಲಿ ಪ್ರಮುಖ ಯೋಜನೆಗಳ ಸಹಕಾರದೊಂದಿಗೆ ಉಭಯ ದೇಶಗಳ ನಡುವಿನ ದ್ವಿಪಕ್ಷೀಯ ಸಂಬಂಧ ಇತ್ತೀಚಿನ ವರ್ಷಗಳಲ್ಲಿ ಬಲಗೊಂಡಿದೆ.

<><*<><>*><>

ನೇಪಾಳದ ಮುನಾಲ್‌ನಲ್ಲಿ ಉಪಗ್ರಹ ಉಡಾವಣೆಯ ಸಹಾಯಕ್ಕಾಗಿ ನಿನ್ನೆ ವಿದೇಶಾಂಗ ವ್ಯವಹಾರಗಳ ಸಚಿವಾಲಯ, ಭಾರತ ಸರ್ಕಾರ ಮತ್ತು ನ್ಯೂಸ್ಪೇಸ್ ಇಂಡಿಯಾ ಲಿಮಿಟೆಡ್ ನಡುವೆ ತಿಳುವಳಿಕಾ ಒಪ್ಪಂದಕ್ಕೆ ಸಹಿ ಹಾಕಲಾಯಿತು. ವಿದೇಶಾಂಗ ಸಚಿವಾಲಯದ ಎಂಇಎಯಿಂದ ಜೆ.ಎಸ್ (ಉತ್ತರ) ಅನುರಾಗ್ ಶ್ರೀವಾಸ್ತವ ಮತ್ತು ಎನ್‌ಎಸ್‌ಐಎಲ್‌ನ ನಿರ್ದೇಶಕರಾದ ಅರುಣಾಚಲಂ ಎ ಅವರು ಈ ತಿಳಿವಳಿಕೆ ಪತ್ರಕ್ಕೆ ಸಹಿ ಹಾಕಿದ್ದಾರೆ. ೭ನೇ JCM ಸಭೆಯ ಸಹ-ಅಧ್ಯಕ್ಷತೆಗಾಗಿ ನೇಪಾಳಕ್ಕೆ ವಿದೇಶಾಂಗ ವ್ಯವಹಾರಗಳ ಸಚಿವರ ಭೇಟಿಯ ಸಂದರ್ಭದಲ್ಲಿ, ಈ ವರ್ಷದ ಜನವರಿ ೪ ರಂದು NSIL ಮತ್ತು NAST ನಡುವಿನ ಮುನಲ್ ಉಪಗ್ರಹದ ಉಡಾವಣೆಗಾಗಿ ಈ ಉಡಾವಣಾ ಸೇವಾ ಒಪ್ಪಂದದ ವಿನಿಮಯಕ್ಕೆ ವಿದೇಶಾಂಗ ಸಚಿವಾಲಯ ಸಾಕ್ಷಿಯಾಯಿತು. ಮುನಾಲ್ ಉಪಗ್ರಹವು ನೇಪಾಳದಲ್ಲಿ NAST ನ ಆಶ್ರಯದಲ್ಲಿ ಅಭಿವೃದ್ಧಿಪಡಿಸಲಾದ ಸ್ಥಳೀಯ ಉಪಗ್ರಹವಾಗಿದೆ. APN, ನೇಪಾಳಿ ಬಾಹ್ಯಾಕಾಶ ಸ್ಟಾರ್ಟ್‌ಅಪ್, ಈ ಉಪಗ್ರಹದ ವಿನ್ಯಾಸ ಮತ್ತು ತಯಾರಿಕೆಯಲ್ಲಿ ನೇಪಾಳಿ ವಿದ್ಯಾರ್ಥಿಗಳಿಗೆ ಸಹಾಯ ಮಾಡಿದೆ. ಉಪಗ್ರಹವು ಭೂಮಿಯ ಮೇಲ್ಮೈಯ ಸಸ್ಯವರ್ಗದ ಸಾಂದ್ರತೆಯ ಡೇಟಾಬೇಸ್ ಅನ್ನು ನಿರ್ಮಿಸುವ ಗುರಿಯನ್ನು ಹೊಂದಿದೆ. ಈ ಉಪಗ್ರಹವು NSIL ನ ಪೋಲಾರ್ ಸ್ಯಾಟಲೈಟ್ ಲಾಂಚ್ ವೆಹಿಕಲ್‌ನಲ್ಲಿ ಶೀಘ್ರದಲ್ಲೇ ಉಡಾವಣೆಯಾಗುವ ನಿರೀಕ್ಷೆಯಿದೆ.

<><*<><>*><>

ಬಾಂಗ್ಲಾದೇಶದ ರಾಜಧಾನಿ ಢಾಕಾ ಮತ್ತು ಈಶಾನ್ಯ ಬಂದರು ನಗರವಾದ ಚಟ್ಟಗ್ರಾಮ್‌ನಲ್ಲಿ ಸಾವಿರಾರು ಅಲ್ಪಸಂಖ್ಯಾತ ಹಿಂದೂ ಸಮುದಾಯದ ಸದಸ್ಯರು ನಿನ್ನೆ ಸತತ ಎರಡನೇ ದಿನವೂ ಬೃಹತ್ ಪ್ರತಿಭಟನಾ ರ್‍ಯಾಲಿ ನಡೆಸಿದರು. ತಮ್ಮ ಮನೆಗಳು, ವ್ಯಾಪಾರ ಸ್ಥಳಗಳು ಮತ್ತು ದೇವಾಲಯಗಳ ಮೇಲಿನ ದಾಳಿಗಳನ್ನು ಖಂಡಿಸಿ, ರಾಷ್ಟ್ರವ್ಯಾಪಿ ವಿಧ್ವಂಸಕತೆಯ ಮಧ್ಯೆ ಅವರು ರಕ್ಷಣೆಗಾಗಿ ಒತ್ತಾಯಿಸಿದರು. ಅಲ್ಪಸಂಖ್ಯಾತರಿಗೆ ಕಿರುಕುಳ ನೀಡುವವರ ವಿಚಾರಣೆಯನ್ನು ತ್ವರಿತಗೊಳಿಸಲು

ವಿಶೇಷ ನ್ಯಾಯಮಂಡಳಿಗಳು, ಅಲ್ಪಸಂಖ್ಯಾತರಿಗೆ ಶೇಕಡಾ ೧೦ ರಷ್ಟು ಸಂಸದೀಯ ಸ್ಥಾನಗಳನ್ನು ನೀಡುವುದು ಮತ್ತು ಅಲ್ಪಸಂಖ್ಯಾತರ ರಕ್ಷಣೆಯ ಕಾನೂನನ್ನು ಜಾರಿಗೊಳಿಸುವುದು ಅವರ ಬೇಡಿಕೆಯಲ್ಲಿ ಒಳಗೊಂಡಿತ್ತು. ವಿದ್ಯಾರ್ಥಿಗಳು ಸೇರಿದಂತೆ ಸಾವಿರಾರು ಮುಸ್ಲಿಂ ಪ್ರತಿಭಟನಾಕಾರರು ಢಾಕಾದಲ್ಲಿ ಅಲ್ಪಸಂಖ್ಯಾತರ ಪರವಾಗಿ ಒಗ್ಗಟ್ಟನ್ನು ವ್ಯಕ್ತಪಡಿಸಿದರು. ಶೇಖ್ ಹಸೀನಾ ಪ್ರಧಾನಿ ಸ್ಥಾನಕ್ಕೆ ರಾಜೀನಾಮೆ ನೀಡಿದ ನಂತರ ಹಿಂದೂ ಸಮುದಾಯವು ಹಿಂಸಾಚಾರ ಮತ್ತು ವಿನಾಶದ ಸ್ಥಿತಿಯನ್ನು ಎದುರಿಸುತ್ತಿದೆ.

<><*<><>*><>

ಭಾರತದಲ್ಲಿ ಬಾಂಗ್ಲಾದೇಶದಂತಹ ಪರಿಸ್ಥಿತಿಯನ್ನು ನಿರೀಕ್ಷಿಸುತ್ತಿರುವವರ ವಿರುದ್ಧ ಕೇಂದ್ರ ಪ್ರವಾಸೋದ್ಯಮ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಅವರು ಇದು ಬಾಂಗ್ಲಾದೇಶ ಅಲ್ಲ, ಇದು ನರೇಂದ್ರ ಮೋದಿಯವರ ನೇತೃತ್ವದ ಭಾರತ ಎಂದು ಹೇಳಿದ್ದಾರೆ. ಜೋಧ್‌ಪುರ ವಿಮಾನ ನಿಲ್ದಾಣದಲ್ಲಿ ನಿನ್ನೆ ಸುದ್ದಿಗಾರರೊಂದಿಗೆ ಮಾತನಾಡಿದ ಕೇಂದ್ರ ಸಚಿವರು, ಭಾರತದಲ್ಲಿ ಬಾಂಗ್ಲಾದೇಶದಂತಹ ಪರಿಸ್ಥಿತಿ ಉದ್ಭವಿಸುತ್ತದೆ ಎಂದು ಕೆಲವರು ಹೇಳುತ್ತಿರುವುದು ದುರದೃಷ್ಟಕರ ಎಂದರು.

<><*<><>*><>

ಕಳೆದ ಏಳೂವರೆ ವರ್ಷಗಳಲ್ಲಿ, ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು, ಪ್ರವಾಹ ಪೀಡಿತರ ನೆರವಿಗೆ ೨ ಸಾವಿರದ ೯೦೦ ಕೋಟಿ ರೂಪಾಯಿಗಿಂತ ಹೆಚ್ಚು ಹಣವನ್ನು ವಿನಿಯೋಗಿಸಿದ್ದಾರೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಹೆಚ್ಚುವರಿಯಾಗಿ, ಪ್ರವಾಹದಿಂದ ಹಾನಿಗೊಳಗಾದ ಬೆಳೆಗಳಿಗೆ ಪರಿಹಾರವಾಗಿ ೨೦೧೭ ರಿಂದ ರಾಜ್ಯದ ೨೨ ಲಕ್ಷಕ್ಕೂ ಹೆಚ್ಚು ರೈತರಿಗೆ ೯೬೪ ಕೋಟಿ ರೂಪಾಯಿಯನ್ನು ವಿತರಿಸಲಾಗಿದೆ. ಪ್ರವಾಹದಿಂದ ಸಂಪೂರ್ಣ ನಾಶವಾದ ೩ ಸಾವಿರಕ್ಕೂ ಹೆಚ್ಚು ಮನೆಗಳು ಮತ್ತು ಭಾಗಶಃ ಹಾನಿಗೊಳಗಾದ ಒಂದು ಲಕ್ಷಕ್ಕೂ ಹೆಚ್ಚು ಮನೆಗಳಿಗೆ ಸರ್ಕಾರ ಪರಿಹಾರವನ್ನು ನೀಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

<><*<><>*><>

ಕರ್ನಾಟಕದ ತುಂಗಭದ್ರಾ ಜಲಾಶಯದ ೧೯ನೇ ಕ್ರೆಸ್ಟ್ ಗೇಟ್ ನ ಬಾಗಿಲು ಮುರಿದಿದ್ದು, ಇಂದು ಬೆಳಗಿನ ಜಾವ ೩.೩೦ ರಿಂದ ೪೯ ಸಾವಿರದ ೭೮೪ ಕ್ಯುಸೆಕ್ ನೀರು ಹರಿದು ಬರುತ್ತಿದೆ. ಇದರಿಂದಾಗಿ ನದಿ ಪಾತ್ರದ ಜನರು ಅತ್ಯಂತ ಎಚ್ಚರಿಕೆ ವಹಿಸಬೇಕೆಂದು ಜಿಲ್ಲಾಧಿಕಾರಿ ಎಂ.ಎಸ್ ದಿವಾಕರ್ ತಿಳಿಸಿದ್ದಾರೆ. ನೀರು ಹೊರಗಡೆ ಬಿಡುವ ಮುಂಬಾಗಿಲಿನ ೧೯ನೇ ಗೇಟ್ ನೀರಿನ ರಬಸಕ್ಕೆ ನಿನ್ನೆ ರಾತ್ರಿ ೧೧:೩೦ಕ್ಕೆ ಮುರಿದ ಪರಿಣಾಮ ಜಲಾಯದಿಂದ ಹೆಚ್ಚಿನ ಪ್ರಮಾಣದ ನೀರು ನದಿಗೆ ಹರಿಯುತ್ತದೆ. ಈ ಹಿನ್ನೆಲೆಯಲ್ಲಿ ನದಿಯ ದಡದಲ್ಲಿರುವ ಹಾಗೂ ಸುತ್ತ ಮುತ್ತಲಿನ ಹಳ್ಳಿಗಳಲ್ಲಿನ ಸಾರ್ವಜನಿಕರು ಜಾಗೃತವಾಗಿರಬೇಕೆಂದು ಜಿಲ್ಲಾಧಿಕಾರಿಗಳು ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ. ಅಧಿಕಾರಿಗಳು ಮತ್ತು ತಂತ್ರಜ್ಞರ ತಂಡವು ಸ್ಥಳದಲ್ಲಿ ಬೀಡು ಬಿಟ್ಟು ದುರಸ್ತಿ ಕಾರ್ಯ ಕೈಗೊಂಡಿದ್ದಾರೆ.

<><*<><>*><>

ಮಾಜಿ ವಿದೇಶಾಂಗ ಸಚಿವ ಕೆ.ನಟವರ್ ಸಿಂಗ್ ಅವರು, ನಿನ್ನೆ ರಾತ್ರಿ ದೆಹಲಿ ಸಮೀಪದ ಗುರುಗ್ರಾಮ್‌ನಲ್ಲಿ ನಿಧನರಾದರು. ಅವರಿಗೆ ೯೩ ವರ್ಷ ವಯಸ್ಸಾಗಿತ್ತು. ಕೆಲದಿನಗಳಿಂದ

ಅನಾರೋಗ್ಯದಿಂದ ಅವರು ಬಳಲುತ್ತಿದ್ದರು. ಅವರ ಅಂತ್ಯಕ್ರಿಯೆ ಇಂದು ದೆಹಲಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ನಟವರ್ ಸಿಂಗ್ ಅವರು ೧೯೮೪ ರಲ್ಲಿ ಪದ್ಮಭೂಷಣ ಪ್ರಶಸ್ತಿಗೆ ಭಾಜನರಾಗಿದ್ದರು. ಅವರು ಹಲವಾರು ಪುಸ್ತಕಗಳನ್ನು ಬರೆದಿದ್ದಾರೆ.

<><*<><>*><>

೨೦೨೪ರ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಭಾರತದ ಅಭಿಯಾನ ಒಟ್ಟು ಆರು ಪದಕಗಳೊಂದಿಗೆ ಸ್ಪರ್ಧೆಯ ಅಂತಿಮ ದಿನವಾದ ನಿನ್ನೆ ಅಧಿಕೃತವಾಗಿ ಮುಕ್ತಾಯಗೊಂಡಿದೆ. ಈ ನಡುವೆ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ, ತನ್ನ ಅನರ್ಹತೆಯ ವಿರುದ್ಧ ಭಾರತದ ಕುಸ್ತಿಪಟು ವಿನೇಶ್ ಫೋಗಟ್ ಅವರ ಮನವಿಯ ಅಂತಿಮ ತೀರ್ಪನ್ನು ಕ್ರೀಡಾ ಮಧ್ಯಸ್ಥಿಕೆ ನ್ಯಾಯಾಲಯ - ಸಿಎಎಸ್ ಮಂಗಳವಾರದವರೆಗೆ ಕಾಯ್ದಿರಿಸಿದೆ. ಇನ್ನು, ಕುಸ್ತಿಪಟು ರೀತಿಕಾ ಹೂಡಾ, ಕ್ವಾರ್ಟರ್-ಫೈನಲ್ ಸೋಲಿನ ನಂತರ ಮಹಿಳೆಯರ ೭೬ ಕೆಜಿ ಸ್ಪರ್ಧೆಯಿಂದ ನಿರ್ಗಮಿಸಿದರೆ, ಗಾಲ್ಫ್ ಆಟಗಾರರಾದ ಅದಿತಿ ಅಶೋಕ್ ಮತ್ತು ದೀಕ್ಷಾ ದಾಗರ್ ಪದಕದ ಸ್ಪರ್ಧೆಯಿಂದ ಹೊರಬಿದ್ದರು. ರೀತಿಕಾ ಹೂಡಾ ಅವರು ಹಂಗೇರಿಯ ಬರ್ನಾಡೆಟ್ ನಾಗಿ ವಿರುದ್ಧ ಗೆಲುವಿನೊಂದಿಗೆ ಉತ್ತಮ ಆರಂಭ ಕಂಡರು. ಆದರೆ ೧-೧ ಅಂಕಗಳ ಹೊರತಾಗಿಯೂ ಟೈ ಬ್ರೇಕರ್ ನಿಯಮದಿಂದ ಕಿರ್ಗಿಸ್ತಾನ್‌ನ ಐಪೆರಿ ಮೆಡೆಟ್ ಕೈಜಿ ವಿರುದ್ಧ ಕ್ವಾರ್ಟರ್-ಫೈನಲ್ ಪಂದ್ಯದಲ್ಲಿ ಸೋಲನುಭವಿಸಿದರು. ಪುರುಷರ ೫೭ ಕೆಜಿ ಸ್ಪರ್ಧೆಯಲ್ಲಿ ಅಮನ್ ಸೆಹ್ರಾವತ್ ಪಡೆದ ಕಂಚು ಪದಕ ಕುಸ್ತಿಯಲ್ಲಿ ಭಾರತದ ಏಕೈಕ ಪದಕವಾಗಿದೆ. ನಿನ್ನೆಗೆ ಅಭಿಯಾನ ಕೊನೆಗೊಳಿಸಿರುವ ಭಾರತ, ಒಂದು ಬೆಳ್ಳಿ ಮತ್ತು ಐದು ಕಂಚಿನ ಪದಕಗಳೊಂದಿಗೆ ಒಟ್ಟಾರೆ ಆರು ಪದಕಗಳನ್ನು ತನ್ನದಾಗಿಸಿಕೊಂಡಿದೆ. ಗಾಲ್ಫ್‌ನಲ್ಲಿ, ಎರಡನೇ ಸುತ್ತಿನ ನಂತರ ೧೪ ನೇ ಸ್ಥಾನದಲ್ಲಿದ್ದ ಅದಿತಿ ಅಶೋಕ್ ಅಂತಿಮ ಸುತ್ತಿನ ನಾಲ್ಕು-ಅಂಡರ್-ಪಾರ್ ೬೮ ಅಂಕಗಳೊಂದಿಗೆ ೨೯ ನೇ ಸ್ಥಾನ ಪಡೆದರು. ಮತ್ತೋರ್ವ ಭಾರತೀಯ ಕ್ರೀಡಾಪಟು ದೀಕ್ಷಾ ದಾಗರ್ ೪೯ ನೇ ಸ್ಥಾನ ಪಡೆದುಕೊಂಡರು.

<><*<><>*><>

ಇಂದು ರಾತ್ರಿ ಸ್ಟೇಡ್ ಡಿ ಫ್ರಾನ್ಸ್‌ನಲ್ಲಿ ನಡೆಯುವ ಸಮಾರೋಪ ಸಮಾರಂಭದೊಂದಿಗೆ ಪ್ಯಾರಿಸ್ ಒಲಿಂಪಿಕ್ಸ್ ೨೦೨೪ ಅಧಿಕೃತವಾಗಿ ಕೊನೆಗೊಳ್ಳಲಿದೆ. ಸಮಾರಂಭವು ಸುಮಾರು ೮೦ ಸಾವಿರ ಪ್ರೇಕ್ಷಕರೊಂದಿಗೆ ಭಾರತೀಯ ಕಾಲಮಾನ ಮಧ್ಯರಾತ್ರಿ ೧೨.೩೦ ಕ್ಕೆ ಪ್ರಾರಂಭವಾಗಲಿದೆ. ಸಮಾರೋಪ ಸಮಾರಂಭಕ್ಕೆ ರೆಕಾರ್ಡ್ಸ್' ಎಂದು ಹೆಸರಿಸಲಾಗಿದೆ, ಇದು ಕ್ರೀಡಾಪಟುಗಳ ಯಶಸ್ಸು ಮತ್ತು ಸಾಧನೆಗಳ ಸಂಭ್ರಮಾಚರಣೆಯನ್ನು ಒಳಗೊಂಡಿರುತ್ತದೆ, ಜೊತೆಗೆ ಪ್ರಮುಖ ನಟರು ಮತ್ತು ಕಲಾವಿದರ ಹಲವಾರು ಪ್ರದರ್ಶನಗಳನ್ನು ಒಳಗೊಂಡಿರುತ್ತದೆ. ಭಾರತಕ್ಕಾಗಿ, ಎರಡು ಬಾರಿ ಒಲಂಪಿಕ್ ಪದಕ ವಿಜೇತರಾದ ಪಿಆರ್ ಶ್ರೀಜೇಶ್ ಮತ್ತು ಮನು ಭಾಕರ್ ಅವರನ್ನು ಸಮಾರಂಭದಲ್ಲಿ ರಾಷ್ಟ್ರಗಳ ಪರೇಡ್‌ಗೆ ಧ್ವಜಧಾರಿಗಳಾಗಿ ಆಯ್ಕೆ ಮಾಡಲಾಗಿದೆ. ತಮ್ಮ ಅಸಾಧಾರಣ ಗೋಲ್ ಕೀಪಿಂಗ್ ಕೌಶಲ್ಯಕ್ಕಾಗಿ 'ವಾಲ್ ಆಫ್ ಇಂಡಿಯಾ' ಎಂದು ಕರೆಯಲ್ಪಡುವ ಶ್ರೀಜೇಶ್ ಈ ಬಾರಿಯ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದ ನಂತರ ಹಾಕಿಯಿಂದ ನಿವೃತ್ತರಾದರು. ಭಾರತದ ಇತಿಹಾಸದಲ್ಲಿ ಒಂದೇ ಆವೃತ್ತಿಯ ಕ್ರೀಡಾಕೂಟದಲ್ಲಿ ಎರಡು ಪದಕಗಳನ್ನು ಗೆದ್ದ ಮೊದಲ ಭಾರತೀಯ ಅಥ್ಲೀಟ್ ಎಂಬ ಹೆಗ್ಗಳಿಕೆಗೆ ಮನು ಭಾಕರ್ ಭಾಜನರಾಗಿ ಇತಿಹಾಸ ನಿರ್ಮಿಸಿದ್ದಾರೆ. ಸಮಾರೋಪ ಸಮಾರಂಭದಲ್ಲಿ, ಒಲಿಂಪಿಕ್ ಜ್ವಾಲೆಯನ್ನು ಸಹ ನಂದಿಸಲಾಗುತ್ತದೆ ಮತ್ತು ಒಲಿಂಪಿಕ್ ಧ್ವಜವನ್ನು ಲಾಸ್ ಏಂಜಲೀಸ್ ೨೦೨೮ ಸಂಘಟನಾ ಸಮಿತಿಗೆ ವರ್ಗಾಯಿಸಲಾಗುತ್ತದೆ, ಇದು ಮುಂದಿನ ಬೇಸಿಗೆ ಕ್ರೀಡಾಕೂಟಕ್ಕೆ ನಾಂದಿಯಾಗಲಿದೆ.

**<><*<><>*><>**

ಪ್ಯಾರಿಸ್‌ನಲ್ಲಿ ನಿನ್ನೆ ನಡೆದ ೧೪೨ ನೇ ಐಒಸಿ ಅಧಿವೇಶನದಲ್ಲಿ ಭಾರತದ ಮೊದಲ ವೈಯಕ್ತಿಕ ಒಲಿಂಪಿಕ್ ಚಿನ್ನದ ಪದಕ ವಿಜೇತ ಅಭಿನವ್ ಬಿಂದ್ರಾ ಅವರಿಗೆ ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ ಪ್ರತಿಷ್ಠಿತ ಒಲಿಂಪಿಕ್ ಆರ್ಡರ್ ಅನ್ನು ನೀಡಿತು. ಒಲಂಪಿಕ್ ಆಂದೋಲನಕ್ಕೆ ಅಸಾಧಾರಣ ಕೊಡುಗೆಗಳನ್ನು ಗುರುತಿಸಿ ಐಒಸಿ ನೀಡುವ ಅತ್ಯುನ್ನತ ಗೌರವ ಒಲಿಂಪಿಕ್ ಆರ್ಡರ್ ಆಗಿದೆ. ೨೦೦೮ ರ ಬೀಜಿಂಗ್ ಕ್ರೀಡಾಕೂಟದಲ್ಲಿ ಪುರುಷರ ೧೦ ಮೀಟರ್ ಏರ್ ರೈಫಲ್ ಸ್ಪರ್ಧೆಯಲ್ಲಿ ಬಿಂದ್ರಾ ಅವರು ಭಾರತದ ಮೊದಲ ವೈಯಕ್ತಿಕ ಒಲಿಂಪಿಕ್ ಚಿನ್ನವನ್ನು ಗೆದ್ದರು. ೧೫೦ ಕ್ಕೂ ಹೆಚ್ಚು ವೈಯಕ್ತಿಕ ಪದಕಗಳನ್ನು ಒಳಗೊಂಡಿರುವ ವಿಶಿಷ್ಟ ವೃತ್ತಿಜೀವನದೊಂದಿಗೆ, ಬಿಂದ್ರಾ ಭಾರತೀಯ ಕ್ರೀಡೆಗಳಲ್ಲಿ ಪ್ರಮುಖ ವ್ಯಕ್ತಿಯಾಗಿದ್ದಾರೆ.

**<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>**

**<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ಅಪರಾಹ್ನ <>*><>**